Regd No B G 155

(5) 2

15—3—1965

ಸತ್ಯವಾದಿ

48 Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಂಸ್ಥೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರಿಂದ ಎಂ ಎಸ್ ಕೃಷ್ಣರಾವ್

ಭಾರತ ನರ್ತಕಿಯಿಂದಿಬ್ಬರ ಬೆಲೆ ರೂ 750

ವಾರ್ತಾ ವಿಶೇಷಗಳು

ನಿರಾಶ್ರಿತರ ಮೇಲೆ ಲಾರಿ ಹೊಡೆತ

ಬರ್ಲಿನ್ (ಡಿಪಿಎ)— ಪಶ್ಚಿಮ ಜರ್ಮನಿಯಲ್ಲಿನ ಬಾಡ್‌ಗೊಡೆಸ್‌ಬರ್ಗಿನಲ್ಲಿ ಇಬ್ಬರು ಭಾರತೀಯ ನರ್ತಕಿಯರಿಂದನ್ನು 750 ರೂಗಳಿಗೆ ವಿಮಾನಾಟ ಮಾಡಿ ಏರ್ಪಾಟು ; ಈ ಕಾಲದಲ್ಲಿಯೂ ಜರ್ಮನಿಯಂತಹ ಸುಸಂಸ್ಕೃತ ದೇಶದಲ್ಲಿ ಈ ರೀತಿಯ ಮನುಷ್ಯ ವ್ಯಾಪಾರ ನಡೆಯುವುದು ಎಂದು ಗಾಬರಿ ಪಡಬೇಕಾಗಿಲ್ಲ; ನಡೆದ ವಿಮಾನಾಟ ಜೀವಂತ ನರ್ತಕಿಯರದ್ದಲ್ಲ! ಇವು ಅತ್ಯಾಕರ್ಷಕವಾದ ಅಂಡಯುವ ಹೆಣ್ಣುಗಳ ಬೊಂಬೆಗಳು!

(ಯು ಪಿ ಎಸ್)

ಶವ

ಬೆಂಗಳೂರು— ವೆಸ್ಟ್‌ಇಂಡೀಸು ಟೀವಿನ್ನೇಲೆ ಕೈಕೆಟ್ಟು ಪಂದ್ಯ ಆಡಲು ಆಸ್ಟ್ರೇಲಿಯಾ ಟೀವು ಮುಂದಿನ ತಿಂಗಳು ಬರಲಿದೆ : ಆ ಕಾಲದಲ್ಲಿ ಉಪಯೋಗಿಸಲು ತರಿಸಲಾಗಿದ್ದ 48 ಕ್ರಿಕೆಟು ಚಾಡುಗಳು ಕಳವಾಗಿವೆ.

ಆತ್ಮಹತ್ಯೆ

ಕಲ್ಕತ್ತಾ— ಪಾಕಿಸ್ತಾನವು ಜಲಪಲಗಿ ಜಿಲ್ಲೆಯ ಬೆರೂಬರಿ ಭಾಗದಲ್ಲಿ ಸುಮಾರು ಎಕ್ಕೆ ಭಾರತ ಭೂಮಿಯನ್ನು ಅಕ್ರಮವಾಗಿ ವಿಸ್ತರಿಸಿದೆಯೆಂದು ಭಾರ್ವರ್ಡ್ ಜಾಕ್ಸನ್ ಪದ್ಯ ಅಮುಲ್ಯೆಂದ್ರಯ ಶಾಸನಸಭೆಯಲ್ಲಿ ಹೇಳಿದರು.

★

ಶಾಲೆಯ್ದು ಪರಿಚಾರಿಗೆ

ಪ್ರೌಢಶಾಲಾ ಶಿಕ್ಷಕರುಗಳ
ಅಖಿಲ ಭಾರತ ಮಟ್ಟದ ಧರ್ಮಾಧಿಕಾರಿ
ರಾಜಕಾರ್ಯದರ್ಶಿ, ಜ್ಯೋತಿರ್ವಿದ್ವನ್ಮಣಿ
ಮದಕ್ಕ ಕೃಷ್ಣಜೋಯಿ ಸಾವಕಂದ
16 ಮಂಗಳವಾರ ಚತುರ್ದಶಿ ಪುಣ್ಯ

ನಾಳೆ ಹೋಳ್ಕಬ್ಬದ ದ್ರಯುಕ್ತ
ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ಮದರಾಸು— ಪೋಲೀಸರು ಅಡಳಿತ ಪಕ್ಷದ ಚಿಹ್ನೆಗೊಂಬೆಯಾಗಿರುವೆಂದು ನಿಷ್ಪಕ್ಷಪಾತವಾಗಿ ವರ್ತಿಸುತ್ತಿರುವರೆಂದೂ ಶಾಸನಸಭೆಯಲ್ಲಿ ಮುಖ್ಯಮಂತ್ರಿಗಳು ಮೊನ್ನೆ ತಿಳಿಸಿದರು.

ತಿರುವಂಡ್ರಂ— ಕೊಸಿಕೋಡು ಜಿಲ್ಲೆಯ ತನ್ನೂರಿನಲ್ಲಿ ಎಂದು ಪಕ್ಷಗಳಲ್ಲಿ ಹೊಡೆಚಾಟವಾಗಿ ಪೋಲೀಸರು ಗುಂಡು ಹಾರಿಸಿದ ಪ್ರಯುಕ್ತ ಇಬ್ಬರು ಗಾಯಗೊಂಡರು.

ಮದರಾಸು— ಹಿಂದಿ ವಿರುದ್ಧ ಚಳವಳಿಯಲ್ಲಿ ಪೋಲೀಸರ ಗೋಳಿಬಾರಿನಿಂದ ಸತ್ತವರ ಸಂಖ್ಯೆಯನ್ನು ಡಿ ಎಂ ಕ ಸದಸ್ಯರು ಹೇಳಿರುವದು ಅತಿಶಯೋಕ್ತಿ ಎಂದು ಶಾಸನಸಭೆಯಲ್ಲಿ ಗೃಹಮಂತ್ರಿಗಳು ಹೇಳಿದ್ದನ್ನು ಡಿ ಎಂ ಕೆ ಕೃಷ್ಣನ್ ತಿರಿ ಪ್ರತಿಭಟಿಸಲು ಅವರನ್ನು ಸ್ಪೀಕರು 'ಗೆಟ್ ಔಟ್' ಎನ್ನಲು ಸಭೆಯನ್ನು ಬಿಟ್ಟು ಹೋದರು : ಸಂಜೆ ಈ ವಿಚಾರದಲ್ಲಿ ತುಂಬಾ ಗೊಂದಲವಾಯಿತು.

★

ಪ್ಯಾರಿಸ್ (ಫ್ರಾನ್ಸ್)— ಏಕಾಂತ ವಾಸದ ಪರಿಣಾಮವನ್ನು ಅರಿಯಲು ಡಿಸೆಂಬರು 14 ರಂದು 240 ಅಡಿ ಆಳದ ಗುಹೆಯಲ್ಲಿದ್ದ ಮೂರು ತಿಂಗಳ ನಂತರ ಒಬ್ಬ ಫ್ರೆಂಚು ಯುವತಿ ಸರ್ಫ್ ಊಲಕ್ಕೆ ಬಂದಳು : ಆ ಕಾಲದಲ್ಲಿ ಅವಳಿಗೆ ಆಹಾರ, ಶಾಖ, ವಿದ್ಯುಚ್ಛಕ್ತಿ ಸಂಬರಾಜು ಮಾಡಲಾಗುತ್ತಿತ್ತು : ಅಲ್ಲಿ ಅವಳ ಜೊತೆಯಲ್ಲಿ ಇಂದು ಬಿಳಿ ಇಲಿ ಮರಿಕ್ಕಿ ಇತ್ತು.

★

ಶಾಲಿಸುತ— ಅತ್ಯಂತ ಹಗುರವಾದ ಲೋಹ ಲಿಥಿಯಂ ರೆಡಿಯಾದಲ್ಲಿ ಹೇರಳವಾಗಿ ದೊರೆತಿದೆ.

ಪೂನಾ— ಪುನಶ್ಚಾರಿಕವಾದ ಪಿಎಸ್ಪಿ ಪಾರ್ಲಿಮೆಂಟರಿ ಶ್ರೀ ಗೋಕೆಯವರು ವಾಮಮಾರ್ಗವನ್ನು ಏಕಾಟ್ಟು ಮೇಲೆ ಪ್ರತಿಬಂಧಕ ಹೇರಲು ಹೇಳಿದರು

ಕೊಂಚಿ— ಭಾರತದೊಂದಿಗಿನ ವ್ಯಾಪಾರ ವ್ಯವಹಾರಗಳನ್ನು ಗೌರವಾನ್ವಿತವಾಗಿ ವ್ಯವಸ್ಥೆ ಮಾಡಿಕೊಳ್ಳಲು ಪಾಕಿಸ್ತಾನವು ಸದಾ ಸಿದ್ಧವೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಭುಟ್ಟೋ ಹೇಳಿದರು.

ಏಡೆನ್— ಮೊನ್ನೆ ಬಜೂಕಾ ಫಾಳಿಯಿಂದ ಇಬ್ಬರು ಬ್ರಿಟಿಷ್ ಸೋಲ್ಜರುಗಳು ಗಾಯಗೊಂಡನಂತರ ಮತ್ತೆ ಎಂಡು ಬಾಂಬುಗಳು ಸ್ಫೋಟವಾದವು.

ಭೂಪಾಲ್.... ಒಂದು ಅಂತರ್ಜಾತಿ ವಿವಾಹ ಮೊನ್ನೆ ನಡೆದು ಎಂಡು ಪಂಗಡಗಳಲ್ಲಿ ಘರ್ಷಣೆ, ಪೋಲೀಸು ಫೈರಿಂಗ್ ಮೇಲೆ ಕಲ್ಲು ಸೆಕ್ಷನ್ ನಡೆದು ಕೆಲವರು ಗಾಯಗೊಂಡರು — ಪ್ರತಿಬಂಧಕಾಜ್ಞೆ ಜಾರಿಮಾಡಲಾಗಿದೆ.

ಅನಂತಪುರ— ಉಗಿಹೊಡೆದ ಮೇರೆ ಪಾಲಯದ ರಥಕ್ಕೆ ಸಿಕ್ಕಿ ಆಜ್ಞೆಗುಜ್ಜೆಯಾಗಿ ಸಕ್ಕರು ; ಮೂವರು ಗಾಯಗೊಂಡರು

ಮೈಸೂರು— ಬಾಮರಾಜಪುರಂ ರೈಲ್ವೆ ಸ್ಟೇಷನ್ನಿನಲ್ಲಿ ನಿನ್ನೆ ಹಾಜಪಸಗೂಡಿನ ಶ್ರೀಕಂಠೇಶ್ವರ ಉಕ್ಕಿನತಕ್ಕೆ ಹೋಗಲು ತನ್ನ ಹೊಡೆದೆ ಮುಂಡಕಾದವನನ್ನು ರೈಲಿಗೆ ಹತ್ತಿಸಿ ರೈಲು ಹೊರಡಲು ತಾನು ಹತ್ತವಾಗಿ ಕಾಲು ಜಾರಿ ಬಿದ್ದು ಪಕ್ಕಗಳಿಗೆ ಸಿಕ್ಕಿ ಹೊಸದುರಾಗಿ ವಿದುಷಿಯಾಗಿದ್ದ 23 ವರ್ಷದ ಪುಟ್ಟಮಲ್ಲಯ್ಯನು ಮೃತಪಟ್ಟನು.

ವಿಶೇಷಗಳು

ವಿಶಾಲ್— ಒಂದು ದೇಷಣ ಅಂಗಡಿಯಲ್ಲಿ ಅಕ್ಕಿ ಬೆಲೆ ಹೆಚ್ಚಿಸಿದ್ದನ್ನು ಪ್ರತಿಭಟಿಸಿ ಗಲಭೆ ಮಾಡಿದ ಮೂವರು ಬಂಗಾಳಿ ನಿರಾಶ್ರಿತರ ಮೇಲೆ ಪೋಲೀಸರು ಮೆಷ್ಕಗೆ ಲಾಠಿ ಚಾರ್ಜು ಮಾಡಿದರು.

ಲಕ್ನೋ— ಶಾಸನಸಭಾ ಸದಸ್ಯರು ತಮ್ಮ ಹೆಸರನ್ನು ಬದಲಾಯಿಸಲು ಪಾಕಿಸ್ತಾನವಿಲ್ಲವೆಂದು ಉತ್ತರ ಪ್ರದೇಶ ಶಾಸನಸಭೆ ಅಡಳಿತಗಾರರು ತೀರ್ಮಾನಿಸಿರುವರು

ಬೆಂಗಳೂರು ಪೇಟೆಯಲ್ಲಿ ಭತ್ತದ ಬೆಲೆಯಲ್ಲಿ ಬದಲಾವಣೆಯಿಲ್ಲ

ಉತ್ತರ ಪ್ರದೇಶ ಕಾಂಗ್ರೆಸಿನಲ್ಲಿ ಒಡಕಾಗುವದನ್ನು ತಪ್ಪಿಸಬೇಕೆಂದು ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕಾಮರಾಜರು ತಿಳಿಸಿರುವರು

ಪಾರ್ಲಿಯಾಂಟಿನ ಕಾಂಗ್ರೆಸು ಸದಸ್ಯರುಗಳು ನೆಹರು ನಿಧನ ಕಾರಣ ಹೋಳಿ ಆಚರಿಸುವದಿಲ್ಲ

ಹೆಚ್ಚಿನ ತುಪ್ಪಭತ್ತ ರೈಲ್ವೆ ಕೆಲಸಗಾರರಿಗೆ ಹೊರೆಯ ಸಂಭವವಿದೆ

ಹಾಟ್ನಾ— ಜಾಪೋಕಾರಿ ಜಾತ್ರೆಯಲ್ಲಿ ಒಬ್ಬ ರೈತನು ಜವಾಹರ್ ರೀತಿಯಿಂದ ಎಕ್ಕೆಗೆ 57 ಮಣ ಭತ್ತ ಬೆಳೆದಿರುವನು — ಪಕ್ಕದ ಗದ್ದೆಗಳಲ್ಲಿ ಸಾಂಪ್ರದಾಯಿಕ ರೀತಿಯಿಂದ ಎಕ್ಕೆಗೆ 22 ಮಣ ಬೆಳೆಯಾಗಿದೆ

ಎಷ್ಟು ಕರಹ ಹಿಂದಿ

ಬಿಹಾರಿನಲ್ಲಿ 153 ಮಾತೃಭಾಷೆಗಳಿವೆ : ಅವೆಲ್ಲಾ ಹಿಂದಿಯಾಗಿದ್ದು ವೆಕ್ಯಾಸವಿದೆಯಂತೆ

ವಿ ನಾ ಶ ಕ್ಕೆ ಕಾ ರ ಕ

ಭಾರತ ಪಾವತಿ ಮಾಡಬೇಕಾದ ಅಗಾಧ ಬಡ್ಡಿ.

★

1964 ಡಿಸೆಂಬರ್ 31 ಕ್ಕೆ ಭಾರತದ ವಿದೇಶೀ ಸಾಲವನ್ನು 2323-43 ಕೋಟಿಗಳೆದ್ದುವೆಂದು ರಾಜ್ಯಸಭೆಯಲ್ಲಿ ಈಚೆಗೆ ತಿಳಿಸಲಾಯಿತು : 66–67 ರಿಂದ ಪ್ರಾರಂಭವಾಗುವ 4 ನೇ ಯೋಜನೆಯಲ್ಲಿ ನಾವು ಪಾವತಿ ಮಾಡಬೇಕಾಗಿರುವ ದು 687 ಕೋಟಿಗಳೆಂದೂ ಬಡ್ಡಿಯು 436-38 ಕೋಟಿ ರೂಗಳಾಗುವುದೆಂದೂ ಅಂದಾಜು ಮಾಡಲಾಗಿದೆ.

ವಿದೇಶದಲ್ಲಿ ಭಾರತದ ವ್ಯಾಪಾರ ಸಂಸ್ಥೆಗಳು, ವಿದೇಶ ಕಂಪೆನಿಗಳು ಮತ್ತು ಬ್ಯಾಂಕುಗಳ ಹಣವು ರೂ 4244 ಕೋಟಿಗಳಿವೆ : ಈ ಪೈಕಿ ಪಾಕಿಸ್ತಾನದಲ್ಲಿ 15 ಕೋಟಿ, ಬ್ರಿಟನ್ನಿನಲ್ಲಿ 12 ಕೋಟಿ, ಜಪಾನಿನಲ್ಲಿ 4 ಕೋಟಿ, ಬ್ಯಾಂಕ್ ಮತ್ತಿತರೆ ಕಡೆಗಳಲ್ಲಿ 2-1 ಕೋಟಿ ಇರುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

‡ ಭಾರತವು ನಾಲ್ಕನೇ ಯೋಜನೆಯಲ್ಲಿ ಕೇವಲ ಬಡ್ಡಿಗಾಗಿ 486 ಕೋಟಿ ರೂಗಳನ್ನು ಕೊಡಬೇಕಾಗಿದ್ದರೆ, ನಾವು ಇನ್ನೂ ಸಾಲ ಮಾಡುತ್ತಾ ಹೋದರೆ ಈ ವಿಪರೀತ ಖರ್ಚನ್ನು ಭಾರತವು ಎಲ್ಲೀವರೆಗೆ ತಡೆಯಬಲ್ಲದು ; ಬ್ರಿಟಿಷರ ಕಾಲದಲ್ಲಿ ಬ್ರಿಟಿಷರ ಶಂಬಳ ಮತ್ತು ಪೆನ್ಷನ್ ಖರ್ಚನ್ನೇ ನಾವು ದುಬಾರಿ ಖರ್ಚೆಂದು ಹೇಳುತ್ತಿದ್ದೆವು ನಾವು. ಇಂದು ಅದು 436 ಕೋಟಿಗಳಾಗಿದ್ದು ಇನ್ನೂ ಏರುತ್ತಿದೆ : ಭಾರತವು ಇದನ್ನು ತಡೆಯಬಲ್ಲದೆ ? ನಾವು ಬಿಟಿಷರ ಕಾಲಕ್ಕಿಂತ ಈಗ ವಿದೇಶಿಯರಿಂದ ಹೆಚ್ಚು ಗುಲಾಮರಾಗಿಲ್ಲವೇ ?

— (Truth) —

ದಿವ್ಯವಾಣಿ

ಜೀವಿತವು ಅವುಗಳ ಲೋಹಗಳಂತಿದ್ದು, ಚಿಕ್ಕ ಪ್ರಮಾಣದಲ್ಲಿ ಹೆಚ್ಚು ಕ್ಷೂಗಬೇಕು.

ಪ್ರಣವ ವೇದ

ತಾವು ಕಂಡುಹಿಡಿದಿರುವ 'ಪ್ರಣವ ವೇದ' ವೆಂಬುದನ್ನು 5 ನೇ ವೇದ ವೆಂದು ಸಂಭೋದಿಸಿ, ಅದರ ಮಹತ್ವವನ್ನು 'ರೇಡಿಯೊಟ್' ಸಂಪಾದಕರಾದ ಶ್ರೀ ಎಂ ಎಸ್ ಜಲುವಾಚಾರ್ಯರವರು ಮೊನ್ನೆ ಮೈಸೂರು ಇಂದ್ರಭವನದಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ವುಡ್‌ಲಾಂಡ್ 12–3–65 ರಿಂದ
ಶಿ . ನ ಅಮೋಘ ಪ್ರಾರಂಭ

ಬಿಮಲ್ ರಾಯ್‌ರವರ — ಮನಮೋಹಕ ಹಿಂದಿ ಚಿತ್ರ

ಬೆನೆಜೀರ್ BENAZIR

ನಾಳೆ– ಅಶೋಕ್‌ಕುಮಾರ್, ವಿಜಯಾಲಕ್ಷ್ಮಿ, ಶಶಿಕಪೂರ್, ಫಿರೋಜ್‌ಖಾನ್, ಕನ್ನಡ

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— ಜನಪ್ರಿಯ 2 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ, ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camarajapuram Mysore 4

ಗೋರಕ್ಷಣ ಪತ್ರಿಕೆಗೆ ಚಂದಾದಾರರಾಗಿರಿ

"ಗೋರಕ್ಷಣ" ಕ್ಕೆ ಜೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಶಾಸ್ತ್ರಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಶಾಸ್ತ್ರಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಡನಾಡಿನಲ್ಲಿ ಗೋರಕ್ಷಣೆ, ಪಶುಸಂಪತ್ತಿನ ಅಭಿವೃದ್ಧಿ, ಶಾಕಾಹಾರ ಪ್ರಚಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ನೈಸೆ ; ಗೋರಕ್ಷಣ ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು ೪